# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ : 1384

ಸದಸ್ಯರ ಹೆಸರು : ಶ್ರೀ.ಎಸ್.ಎಲ್.ಭೋಜೇಗೌಡ

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 30.12.2022.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕಾಫಿ ಬೆಳೆಗಾರರಿಗೆ ಸರ್ಕಾರ ನೀಡುತ್ತಿರುವ ವಿವಿಧ ಬಗೆಯ ಸೌಲಭ್ಯಗಳು ಯಾವುವು ಹಾಗೂ ಕಾಫಿ ಬೆಳೆಗಾರರಿಗೆ ಸರ್ಕಾರ ಎಷ್ಟು ಬೆಂಬಲ ಬೆಲೆಯನ್ನು ಘೋಷಿಸಿದೆ; | ಕಾಫಿ ಬೆಳೆಗಾರರಿಗೆ ಸರ್ಕಾರ ನೀಡುತ್ತಿರುವ ವಿವಿಧ ಬಗೆಯ ಸೌಲಭ್ಯಗಳು ಕೆಳಗಿನಂತಿವೆ.<br>ಕಾಫಿ ಮಂಡಳಿಯಿಂದ<br>1. ಸಣ್ಣ ಕಾಫಿ ಬೆಳೆಗಾರರಗೆ (10 ಹೆಕ್ಟೇರ್ ವರೆಗೆ ಕಾಫಿ ತೋಟ ಹೊಂದಿರುವ ರೈತರಿಗೆ) ಮರುನಾಟಿ ಕಾರ್ಯಕ್ರಮದಡಿ ಅನುತ್ಪಾದಕ / ಹಳೆಯ ಗಿಡಗಳನ್ನು ತೆಗೆದು ಹೆಚ್ಚಿನ ಇಳುವರಿ ನೀಡುವ ಮತ್ತು ರೋಗ ನಿರೋಧಕ ಶಕ್ತಿಯುಳ್ಳ ತಳಿಗಳನ್ನು ಮರು ನಾಟಿ ಮಾಡಲು ರೋಬೋಸ್ಟಾ - ರೂ.2.00ಲಕ್ಷ ಪ್ರತಿ ಹೆಕ್ಟೇರ್, ಅರೆಬಿಕಾ – ರೂ.2.75ಲಕ್ಷ ಪ್ರತಿ ಹೆಕ್ಟೇರ್, ಘಟಕ ವೆಚ್ಚಕ್ಕೆ ಶೇ.40ರಷ್ಟು ಸಹಾಯಧನವನ್ನು ಒದಗಿಸಲಾಗುತ್ತಿದೆ.<br><br>2. ನೀರಾವರಿ ಸೌಲಭ್ಯ ಕಲ್ಪಿಸುವ (Water Augmentation) ಕಾರ್ಯಕ್ರಮದಡಿ ನೀರು ಸಂಗ್ರಹಣಾ ಘಟಕ ಸ್ಥಾಪನೆ ಮತ್ತು ನೀರಾವರಿ ಉಪಕರಣಗಳ ಖರೀದಿಗಾಗಿ ಘಟಕ ವೆಚ್ಚದ ಶೇ.40ರಷ್ಟು ಗರಿಷ್ಟ2.5 ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.<br><br>3. ಕಾಫಿ ತೋಟಗಳ ಪರಿಸರ ಪ್ರಮಾಣೀಕರಣ (Eco- Certification) ಕೈಗೊಳ್ಳಲು ಶೇ.50% ರಷ್ಟು ಗರಿಷ್ಟ ರೂ.0.50ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ.<br><br>4. ಸಂಘಟಿತವಾಗಿ ಕಾಫಿ ಮಾರಾಟ ಮಾಡುವುದನ್ನು ಪ್ರೋತ್ಸಾಹಿಸಲು ಸಣ್ಣ ಕಾಫಿ |

| | | |
|---|---|---|
| | | ಬೆಳೆಗಾರರು, ಸ್ವಸಹಾಯ ಸಂಘಗಳು, ಸಹಕಾರ ಸಂಘಗಳಿಗೆ ರೂ.4/- ಪ್ರತಿ ಕೆಜಿ ಶುದ್ಧ ಕಾಫಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.<br><br>5. 2 ಹೆಕ್ಟೇರ್ ವರೆಗೆ ತೋಟ ಹೊಂದಿರುವ ಪರಿಶಿಷ್ಟ ಜಾತಿಯ ಕಾಫಿ ಬೆಳೆಗಾರರಿಗೆ ವಿಶೇಷ ಯೋಜನೆಯಡಿ ಮರುನಾಟಿ, ನೀರಿನ ತೊಟ್ಟಿ ನಿರ್ಮಾಣ, ಕಾಫಿ ಒಣಗಿಸುವ ಘಟಕ, Pulper, ಸಂಗ್ರಹಣಾ ಕೊಠಡಿ ನಿರ್ಮಿಸಲು ಘಟಕ ವೆಚ್ಚದ ಶೇ.90ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.<br><br>6. 2 ಹೆಕ್ಟೇರ್ ಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಪರಿಶಿಷ್ಟ ಜಾತಿ ಕಾಫಿ ಬೆಳೆಗಾರರಿಗೆ ವಿಶೇಷ ಯೋಜನೆಯಡಿ ಮರುನಾಟಿ, ನೀರಿನ ತೊಟ್ಟಿ ನಿರ್ಮಾಣ, ಕಾಫಿ ಒಣಗಿಸುವ ಘಟಕ, Pulper, ಸಂಗ್ರಹಣಾ ಕೊಠಡಿ ನಿರ್ಮಿಸಲು ಘಟಕ ವೆಚ್ಚದ ಶೇ.75 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.<br><br>7. ರಫ್ತು ಉತ್ತೇಜಿಸಲು ಮೌಲ್ಯ ವೃದ್ಧಿ ಮಾಡಲಾದ ಕಾಫಿಗೆ ಪ್ರತಿ ಕೇಜಿಗೆ ರೂ.3/- ,ಅಧಿಕ ಮೌಲ್ಯದ ಹಸಿರು ಕಾಫಿಗೆ ಪ್ರತಿ ಕೇಜಿಗೆ ರೂ.2/- ಮೌಲ್ಯವರ್ಧನೆಗೆ ಯಂತ್ರಗಳ ವೆಚ್ಚಕ್ಕಾಗಿ ಸಾಮಾನ್ಯ ವರ್ಗದವರಿಗೆ ಶೇ.40 ರಷ್ಟು ಹಾಗೂ ಸ್ವಸಹಾಯ ಸಂಘಗಳಿಗೆ, ಮಹಿಳೆ, ಅಲ್ಪಸಂಖ್ಯಾತರು, ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು.<br><br>ತೋಟಗಾರಿಕೆ ಇಲಾಖೆಯಿಂದ ಕಾಫಿ ಬೆಳೆಗಾರರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕಾಫಿ ಬೆಳೆಯೊಂದಿಗೆ ಅಂತರ ಬೆಳೆಯಾಗಿ ಕಾಳು ಮೆಣಸು ಬೆಳೆಯಲು ತಗಲುವ ಘಟಕ ವೆಚ್ಚದ ಶೇ. 40 ರಂತೆ ಪ್ರತಿ ಹೆಕ್ಟೇರಿಗೆ ರೂ.20,000 ಗಳ ಸಹಾಯಧನವನ್ನು |

ನೀಡಲಾಗುತ್ತಿದೆ.

2. ಕಾಫಿ ತೋಟಗಳಲ್ಲಿ ಕಾಳುಮೆಣಸು ಪುನಃಶ್ಚೇತನಕ್ಕಾಗಿ ತಗಲುವ ಘಟಕ ವೆಚ್ಚದ ಶೇ. 50 ರಂತೆ ಪ್ರತಿ ಹೆಕ್ಟೇರಿಗೆ ರೂ.10,000 ಗಳ ಸಹಾಯಧನವನ್ನು ನೀಡಲಾಗುತ್ತಿದೆ.

3. ಕಾಫಿ ತೋಟಗಳಲ್ಲಿ ಜೇನು ಕೃಷಿಯನ್ನು ಪ್ರೋತ್ಸಾಹಿಸಲು ರಾಜ್ಯವಲಯದ ಜೇನು ಸಾಕಾಣಿಕೆ ಕಾರ್ಯಕ್ರಮದಡಿಯಲ್ಲಿ ಪ್ರತಿ ಫಲಾನುಭವಿಗೆ 10 ಜೇನು ಪೆಟ್ಟಿಗೆಯನ್ನು ಅಳವಡಿಸಿಕೊಳ್ಳಲು ಸಾಮಾನ್ಯ ವರ್ಗದ ರೈತರಿಗೆ ಶೇ.75 ರಷ್ಟು ಎಂದರೆ ರೂ.33,750/-ಗಳ ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಷ್ಟು ಎಂದರೆ ರೂ.40,050/- ಗಳ ಸಹಾಯಧನ ನೀಡಲಾಗುತ್ತಿದೆ.

ಕಾಫಿ ಬೆಳೆಗಾರರಿಗೆ ಬೆಂಬಲ ಬೆಲೆಯನ್ನು ಘೋಷಿಸಿರುವುದಿಲ್ಲ.

The facilities provided by Coffee board to Coffee growers are as follows.

1.The small growers (owning up to 10 Ha. area ) are provided subsidy of 40% on the unit cost i.e for Robusta, it is 2.00 lakhs and for Arabica, it is 2.75 lakhs, towards replantation - for replacement of old / senile and unproductive plants with high yielding, disease tolerant coffee varieties to improve production & productivity of plantations .

**2.** Subsidy of 40% of the unit cost, maximum 2.5 lakhs under Water augmentation programme for creation of water harvesting structures / purchase of irrigation equipments is provided.

**3.** Subsidy of 50% , maximum 0.5 lakhs, towards cost of certification under Eco-Certification of Coffee program is

provided.

**4.** Incentives @ Rs. 4/- per Kg. of Coffee will be provided for supporting Small Growers Collectives / Self Help Groups / Cooperatives to encourage marketing of coffee on community basis.

5. For the benefit of SC/ST coffee growers, Board is providing subsidy @ 90% for growers having holdings up to 2 hectares.

6. Subsidy @ 75% for SC/ST coffee growers having holdings more than 2 hectares for replantating , water tank, pulpers, drying yard and godown is provided.

7. To promote export , incentives of Rs.3/- per kg for value added coffee , incentives of Rs.2/- per kg for high valued green coffee, 40% subsidy for general category for expenditure of equipments required for value addition and 50% for self help groups, women, minority, handicapped, scheduled caste /scheduled tribe is provided.

The schemes implemented by Department of Horticulture to increase the income of Coffee growers

1) Subsidy of Rs.20,000 per hectare which is 40% of the unit cost, will be provided for area expansion of Black pepper in Coffee plantations under National Horticulture Mission Scheme.

2) Subsidy of Rs.10,000 per hectare which is 50% of the unit cost, will be provided for rejuvenation of Black pepper in Coffee plantations under National Horticulture Mission Scheme.

3)Encouraging Apiculture in Coffee gardens by providing 75% of subsidy at Rs.33,750 for 10 boxes for general

| | | |
|---|---|---|
| | | category farmers and 90% of subsidy at Rs.40,050 for 10 boxes for SC/ST farmers is provided.<br>B. The Minimum Support Price is not announced by the Government. |
| ಆ) | ಕಾಫಿ ಬೆಳೆಗಾರರನ್ನು ಉತ್ತೇಜನ ಪಡಿಸಲು ಸರ್ಕಾರ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ನೀಡುವುದು ಅವಶ್ಯಕವಾಗಿರುವುದರಿಂದ, ಸರ್ಕಾರ ಈ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳೇನು? | ಕಾಫಿ ಬೆಳೆಗಾರರನ್ನು ಉತ್ತೇಜನ ಪಡಿಸಲು ಸರ್ಕಾರ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ನೀಡುವುದು ಅವಶ್ಯಕವಾಗಿರುವುದರಿಂದ, ಭಾರತೀಯ ಕಾಫಿ ಮಂಡಳಿಯಿಂದ ಅಭಿವೃದ್ಧಿಗಾಗಿ 15ನೇ ಹಣಕಾಸು ಆಯೋಗದಲ್ಲಿ 2022-23 ರಿಂದ 2025-26ರವರೆಗೆ ನೂತನ ಕಾರ್ಯಕ್ರಮಗಳನ್ನು ರೂಪಿಸಲು ಯೋಜನಾ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.<br><br>ಪ್ರಸ್ತಾವನೆಯಲ್ಲಿ ಕೋರಿರುವ ಕಾರ್ಯಕ್ರಮಗಳ ವಿವರ ಕೆಳಕಂಡಂತಿರುತ್ತದೆ.<br>1. ಕಾಫಿ ಪಾಲುದಾರರ ಅಭಿವೃದ್ಧಿ ಬೆಂಬಲ ಕಾರ್ಯಕ್ರಮ<br>2. ದೇಶೀಯ ಕಾಫಿ ಉತ್ತೇಜನ/ಪ್ರಚಾರ<br>3. ಆಧುನಿಕ ತಂತ್ರಜ್ಞಾನವನ್ನು ಅನುಷ್ಠಾನಗೊಳಿಸುವುದು<br><br>As it is necessary to provide more facilities from the Government to encourage Coffee growers, Coffee board of India has submitted a proposal of new programmes for 15$^{th}$ finance commission from 2022-23 to 2025-26 .The programmes proposed are as follows.<br>1.Development support to Coffee stakeholders<br>2.Domestic Coffee promotion/publicity<br>3.Advanced technology infusion |

**ಸಂಖ್ಯೆ: HORTI 627 HGM 2022**

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

C:\Users\Dell\Desktop\ದಿನಾಂಕ30.12.22.Docx